ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1632

ವಿಧಾನ ಪರಿಷತ್ತಿನ ಸದಸ್ಯರ ಹೆಸರು : ಶ್ರೀ ಗೋವಿಂದ ರಾಜು
(ವಿಧಾನ ಸಭೆಯಿಂದ ಚುನಾಯಿತರಾದವರು)

ಉತ್ತರಿಸಬೇಕಾದ ದಿನಾಂಕ : 11.03.2022

ಉತ್ತರಿಸುವ ಸಚಿವರು : ಅರಣ್ಯ ಮತ್ತು ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಹಾಗೂ ಕಾನೂನು ಮಾಪನಶಾಸ್ತ್ರ ಇಲಾಖಾ ಸಚಿವರು.

<table>
<tr><th>ಕ್ರ. ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ.</td><td>ಸರ್ಕಾರದ ಬೆಂಬಲ ಬೆಲೆ ಯೋಜನೆಯಡಿ ಕಳೆದ ಮೂರು ವರ್ಷದಿಂದ ಕೋಲಾರ ಜಿಲ್ಲೆಯಲ್ಲಿ ಎಷ್ಟು ಕ್ವಿಂಟಾಲ್ ರಾಗಿ ಖರೀದಿ ಮಾಡಲಾಗಿದೆ; (ತಾಲ್ಲೂಕುವಾರು ವಿವರ ನೀಡುವುದು)</td><td>ಕನಿಷ್ಟ ಬೆಂಬಲ ಬೆಲೆ ಯೋಜನೆಯಡಿ ಕಳೆದ ಮೂರು ವರ್ಷಗಳಲ್ಲಿ ಕೋಲಾರ ಜಿಲ್ಲೆಯಲ್ಲಿ ಖರೀದಿಸಲಾದ ರಾಗಿಯ ಪ್ರಮಾಣ ಈ ಕೆಳಗಿನಂತಿದೆ.

<table><tr><th>ವರ್ಷ</th><th>ಪ್ರಮಾಣ (ಕ್ವಿಂಟಾಲ್ ಗಳಲ್ಲಿ)</th></tr><tr><td>2018-19</td><td>3,146.67</td></tr><tr><td>2019-20</td><td>33,438.97</td></tr><tr><td>2020-21</td><td>1,51,915.81</td></tr></table>
ತಾಲ್ಲೂಕುವಾರು ವಿವರ ಅನುಬಂಧದಲ್ಲಿ ಒದಗಿಸಲಾಗಿದೆ</td></tr>
<tr><td>ಆ.</td><td>ಖರೀದಿ ಮಾಡಿದ್ದಲ್ಲಿ, ಕಳೆದ ಮೂರು ವರ್ಷದಿಂದ ಸರ್ಕಾರ ಒದಗಿಸಿರುವ ಅನುದಾನವೆಷ್ಟು;</td><td>ಕೋಲಾರ ಜಿಲ್ಲೆಯಲ್ಲಿ ಕನಿಷ್ಟ ಬೆಂಬಲ ಬೆಲೆ ಯೋಜನೆಯಡಿ ರೈತರಿಂದ ಖರೀದಿಸಲಾದ ರಾಗಿಗೆ ಸಂಬಂಧಿಸಿದಂತೆ ಕಳೆದ ಮೂರು ವರ್ಷಗಳಲ್ಲಿ ಈ ಕೆಳಕಂಡಂತೆ ಹಣವನ್ನು ಪಾವತಿಸಲಾಗಿದೆ.

<table><tr><th>ವರ್ಷ</th><th>ಅನುದಾನ (ಕೋಟಿಗಳಲ್ಲಿ)</th></tr><tr><td>2018-19</td><td>ರೂ.0.92</td></tr><tr><td>2019-20</td><td>ರೂ.10.61</td></tr><tr><td>2020-21</td><td>ರೂ.50.72</td></tr></table></td></tr>
<tr><td>ಇ.</td><td>ಈ ಯೋಜನೆಯಡಿಯಲ್ಲಿ ಎಷ್ಟು ಕ್ವಿಂಟಾಲ್ ವರೆಗೂ ರಾಗಿ ಖರೀದಿಗೆ ಬೆಂಬಲ ಬೆಲೆ ನೀಡಲಾಗುವುದು;</td><td>ಕನಿಷ್ಟ ಬೆಂಬಲ ಬೆಲೆ ಯೋಜನೆಯಡಿ ಕಳೆದ ಮೂರು ವರ್ಷಗಳಲ್ಲಿ ಪ್ರತಿ ರೈತರಿಂದ ರಾಗಿ ಖರೀದಿಸಲು ನಿಗದಿಗೊಳಿಸಲಾಗಿದ್ದ ಪ್ರಮಾಣ ಈ ಕೆಳಗಿನಂತಿದೆ.

<table><tr><th>ವರ್ಷ</th><th>ಪ್ರತಿ ಎಕರೆಗೆ</th><th>ಗರಿಷ್ಟ ಪ್ರಮಾಣ</th></tr><tr><td>2018-19</td><td>10 ಕ್ವಿಂಟಾಲ್</td><td>75 ಕ್ವಿಂಟಾಲ್</td></tr><tr><td>2019-20</td><td>10 ಕ್ವಿಂಟಾಲ್</td><td>50 ಕ್ವಿಂಟಾಲ್</td></tr><tr><td>2020-21</td><td>10 ಕ್ವಿಂಟಾಲ್</td><td>50 ಕ್ವಿಂಟಾಲ್</td></tr></table></td></tr>
</table>

ಈ.	ರಾಗಿ ಖರೀದಿ ಕೇಂದ್ರದಲ್ಲಿ 50 ಕೆ.ಜಿ ಪ್ರತಿ ಖಾಲಿ ಚೀಲಕ್ಕೆ ರೂ.10 ಹಾಗೂ ರಾಗಿ ಗುಣಮಟ್ಟ ಪರಿಶೀಲನೆ ಮಾಡಲು ರೂ.200 ರಿಂದ 300 ರೂಪಾಯಿಗಳನ್ನು ಪಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಇಲ್ಲ.
ಉ.	ಬಂದಿದ್ದಲ್ಲಿ, ಈ ಬಗ್ಗೆ ಸರ್ಕಾರ ತೆಗೆದುಕೊಂಡ ಕ್ರಮಗಳೇನು?	ಉದ್ಭವಿಸುವುದಿಲ್ಲ.

ಆನಾಸ 65 ಆರ್‌ಪಿಆರ್ 2022 (ಇ-ಆಫೀಸ್)

(ಉಮೇಶ ವಿ. ಕತ್ತಿ)
ಅರಣ್ಯ ಮತ್ತು ಆಹಾರ, ನಾಗರಿಕ ಸರಬರಾಜು
ಮತ್ತು ಗ್ರಾಹಕರ ವ್ಯವಹಾರಗಳ ಹಾಗೂ
ಕಾನೂನು ಮಾಪನಶಾಸ್ತ್ರ ಇಲಾಖಾ ಸಚಿವರು.